ಸಂಖ್ಯೆ: ಕೆಎಸ್‌ಎಟಿ/ಇಎಸ್‌ಟಿ(1)/ಆರ್‌ಸಿಟಿ–ಸಿಒ/62/2023

ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿ,
6ನೇ ಮತ್ತು 7ನೇ ಮಹಡಿ, ಕಂದಾಯ ಭವನ,
ಕೆ.ಜಿ.ರಸ್ತೆ, ಬೆಂಗಳೂರು–560 009.
ದಿನಾಂಕ: 19–01–2024

# ಸೂಚನಾ ಪತ್ರ

ವಿಷಯ: ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿಯಲ್ಲಿ ಖಾಲಿಯಿರುವ ನ್ಯಾಯಾಂಗಣಾಧಿಕಾರಿ (Court Officer) ಹುದ್ದೆಗಳ ನೇಮಕಾತಿ ಕುರಿತು – ಅರ್ಹ ಅಭ್ಯರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆಗೆ ಹಾಜರಾಗುವ ಬಗ್ಗೆ.

ಉಲ್ಲೇಖ: ಈ ಕಚೇರಿಯ ಅಧಿಸೂಚನೆ ಸಂಖ್ಯೆ ಕೆಎಸ್‌ಎಟಿ/ಇಎಸ್‌ಟಿ(1) ಆರ್‌ಇಸಿಟಿ–ಸಿಒ/62/2023 ದಿನಾಂಕ: 21.08.2023

* * *

ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿಯಲ್ಲಿ ಖಾಲಿ ಇರುವ ನ್ಯಾಯಾಂಗಣಾಧಿಕಾರಿ ಹುದ್ದೆಗಳಿಗೆ ನೇಮಕಾತಿ ಮಾಡುವ ಬಗ್ಗೆ ಉಲ್ಲೇಖಿತದ ಅಧಿಸೂಚನೆಯ ಮೇರೆಗೆ ದಿನಾಂಕ 11.02.2024 ರಂದು ಸ್ಪರ್ಧಾತ್ಮಕ ಪರೀಕ್ಷೆಯನ್ನು ನಡೆಸಲು ತೀರ್ಮಾನಿಸಲಾಗಿದ್ದು, ಅದರಂತೆ ಈ ಸೂಚನಾ ಪತ್ರದೊಂದಿಗೆ ಅನುಬಂಧಿಸಲಾದ ಪಟ್ಟಿಯಲ್ಲಿನ 53 ಅರ್ಹ ಅಭ್ಯರ್ಥಿಗಳು ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿ, ಪ್ರಧಾನ ಪೀಠ, ಕಂದಾಯ ಭವನ, 6 ಮತ್ತು 7ನೇ ಮಹಡಿ, ಕೆಂಪೇಗೌಡ ರಸ್ತೆ, ಬೆಂಗಳೂರು–560 009, ಇಲ್ಲಿ ದಿನಾಂಕ 11.02.2024 ರಂದು ಪೂರ್ವಾಹ್ನ 10–00 ಗಂಟೆಗೆ ಮತ್ತು ಅಪರಾಹ್ನ 2–00 ಗಂಟೆಗೆ ನಡೆಯಲಿರುವ ತಲಾ 3 ಗಂಟೆ ಅವಧಿಯ 2 ಪತ್ರಿಕೆಗಳ ಸ್ಪರ್ಧಾತ್ಮಕ ಪರೀಕ್ಷೆಗೆ ಹಾಜರಾಗುವಂತೆ ಸೂಚಿಸಿ, ಸೂಚನಾ ಪತ್ರಗಳನ್ನು ಈಗಾಗಲೇ ತ್ವರಿತ ಅಂಚೆ ಮೂಲಕ ರವಾನಿಸಲಾಗಿದೆ. ಆದಾಗ್ಯೂ, ಇದರೊಂದಿಗೆ ಅನುಬಂಧಿಸಲಾದ ಪಟ್ಟಿಯಲ್ಲಿನ ಅರ್ಹ ಅಭ್ಯರ್ಥಿಗಳು ಸದರಿ ಸ್ಪರ್ಧಾತ್ಮಕ ಪರೀಕ್ಷೆಗೆ ಮೇಲ್ಕಂಡ ದಿನಾಂಕದಂದು ಹಾಜರಾಗುವಂತೆ ಈ ಮೂಲಕವೂ ಸಹ ತಿಳಿಯಪಡಿಸಿದೆ.

**ಸನ್ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ**

ಸಹಿ/–
ವಿಲೇಖನಾಧಿಕಾರಿ,
ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿ,
ಬೆಂಗಳೂರು–09.